ಹಾಕಬೇಕಲ್ಲ, ಅದಕ್ಕಾಗಿ ಪಾತ್ರೆಗಳು ಬೇಡವೆ?' ಕೇಳಿ ದೀಪಕನಿಗೆ ಸಂಕೋಚವಾಯಿತು. ಏನು ಹೇಳಬೇಕೆಂದೇ ತೋರಲಿಲ್ಲ. ಕಲಾಯಿವಾಲಾ ಮೀಸೆಯಲ್ಲಿಯೇ ಮುಗುಳು ನಗುತ್ತಿದ್ದ.

'ಹೌದು, ಹೌದು ಕಂಡಿದ್ದೇನೆ. ನೀವೇ ನೂರು ಜನ ಬ್ರಾಹ್ಮಣರಿಗೆ ಊಟ ಹಾಕುವವರು... ಹದಿಮೂರು ಜನರಿಗೆ ಊಟ ಹಾಕಿದರೆ ಸಾಕು. ನಾನು ಉದ್ಧಾರವಾಗುತ್ತೇನೆ.'

'ದೇವರು ಒಂದು ದೊಡ್ಡ ಅನ್ಯಾಯ ಮಾಡಿದ ನೋಡು. ನಿನಗೊಬ್ಬ ಮಗನನ್ನು ಕೊಡಲಿಲ್ಲ' ದೀಪಕ್ ಸ್ತಬ್ಧನಾಗಿ ಯೋಚಿಸುತ್ತಿದ್ದ, ಮಕ್ಕಳಿಲ್ಲವೆಂದು ಪರಿತಪಿಸುತ್ತಿದ್ದ ಆ ತಾಯಿಯ ಜೊತೆ ಇಂಥ ಕ್ರೂರ ಹಾಸ್ಯ ಮಾಡುವುದೇ!


ಆದರೆ ಚಿಕ್ಕಮ್ಮ ಸ್ವಲ್ಪವೂ ಬೇಸರಪಟ್ಟುಕೊಳ್ಳದೇ– 'ಹೌದು, ಮಗನಿದಿದ್ದರೆ ನೀವು ಎಲ್ಲಾ ಜವಾಬ್ದಾರಿಯನ್ನೂ ಅವನ ಮೇಲೆ ಹಾಕಿ ನಿಶ್ಚಿಂತೆಯಿಂದಿರುತ್ತಿದ್ದರಲ್ಲವೇ?'

'ಅದು ಆ ಮೇಲಿನ ಮಾತು, ಮಗನಿದ್ದಿದ್ದರೆ ಸೊಸೆಯೂ ಬರುತ್ತಿದ್ದಳು. ಅವಳು ನಿನ್ನ ಈ ಎಲ್ಲ ರದ್ದಿ ಸಾಮಾನುಗಳನ್ನು ತೆಗೆದುಕೊಂಡು ಹೋಗಿ ಗುಜರಿಗೆ ಹಾಕಿ ಅದರ ಬದಲಿಗೆ ಹೊಳೆಯುವ ಸ್ಟೀಲ್ ಪಾತ್ರೆ ತರುತ್ತಿದ್ದಳು.'

'ಓಹೋಹೋ. ಅದ್ಹೇಗೆ ಕೊಡುತ್ತಿದ್ದಳೋ ನಾನೂ ನೋಡಿಕೊಳ್ಳುತ್ತಿದ್ದೆ.'

ಅವರ ಮಾತುಗಳನ್ನು ಕೇಳಿ ದೀಪಕನಿಗೆ ನಗು ತಡೆಯಲಾಗಲಿಲ್ಲ. ಚಿಕ್ಕಮ್ಮನ ಪಾತ್ರೆಗಳನ್ನು ಮುಟ್ಟುವ ಧೈರ್ಯ ಯಾವ ಸೊಸೆಗೂ ಬರಲಿಕ್ಕಿಲ್ಲ ಎಂದುಕೊಂಡು ಒಳಗೆ ನಡೆದನು. ಅವನು ಅದೇ ಯೋಚನೆಯಲ್ಲಿರುವಾಗಲೇ ಹೊರಗೆ ತನ್ನ ಹೆಸರನ್ನು ಕೇಳಿ ಏಕಿರಬಹುದೆಂದುಕೊಳ್ಳುತ್ತಿರುವಾಗಲೇ ಚಿಕ್ಕಪ್ಪ– 'ಅಷ್ಟು ದುಡ್ಡು ನನ್ನ ಹತ್ತಿರ ಎಲ್ಲಿದೆ? ನನ್ನ ಹತ್ತಿರ ಒಂದು ಪೈಸೆ ಕೂಡ ಇಲ್ಲ. ಇರು, ದೀಪಕನ ಹತ್ತಿರವೇನಾದರೂ ಇದೆಯಾ ಕೇಳುತ್ತೇನೆ' ಎನ್ನುತ್ತಿದ್ದರು. ದೀಪಕ ಹೆದರಿದ. 'ಇಷ್ಟೊಂದು ಪಾತ್ರೆಗಳಿಗೆ ಕಲಾಯಿ ಮಾಡಿಸಿದ್ದಾರೆ. ಐವತ್ತು–ಅರವತ್ತು ರೂಪಾಯಿಗಳಾದರೂ ಬೇಕು. ಅಷ್ಟೊಂದು ನನ್ನ ಹತ್ತಿರ ಎಲ್ಲಿದೆ' ಎಂದು ಕೊಳ್ಳುತ್ತಿರುವಷ್ಟರಲ್ಲೇ ಚಿಕ್ಕಪ್ಪ ಒಳಗೆ ಬಂದು, ಬೀರು ತೆಗೆದು ತಮ್ಮ ಸ್ವಿಸ್ ಬ್ಯಾಂಕಿನಿಂದ ದುಡ್ಡು ತೆಗೆದುಕೊಂಡು ಹೊರಟು ಹೋದರು. ದೀಪಕ ಆಶ್ಚರ್ಯದಿಂದ ನೋಡುತ್ತಲೇ ಇದ್ದ.

ಕಲಾಯಿಯವನನ್ನು ಕಳಿಸಿದ ಮೇಲೆ ಚಿಕ್ಕಪ್ಪ ಒಳಗೆ ಬಂದು ದೀಪಕನ ಹತ್ತಿರ ಕುಳಿತುಕೊಂಡು 'ಏನು ಯೋಚಿಸುತ್ತಿರುವೆ ದೀಪೂ, ಚಿಕ್ಕಪ್ಪ ಸುಳ್ಳು ಹೇಳಿದ್ದರೆಂದಲ್ಲವೇ? ಏನು ಮಾಡಲಿ? ಅವತ್ತು ನೀನು ತುಂಬ ಬೇಸರದಲ್ಲಿದ್ದೆ. ಸುಳ್ಳು ಹೇಳಲೇಬೇಕಾಯಿತು. ಈ ದುಡ್ಡು ನಿನಗೆ ಇಷ್ಟು ಹಿಂಸೆ ಕೊಡುವುದೆಂದು ನನಗೆ ಅನಿಸಿರಲೇ ಇಲ್ಲ.'



'ಹೌದು ಚಿಕ್ಕಪ್ಪ, ನೀವು ಇದನ್ನು ಬೇರೆ ಎಲ್ಲಿಯಾದರೂ ಇಡಿ. ನಾನು ನನ್ನ ಸ್ನೇಹಿತರು ಬರುತ್ತಿರುತ್ತಾರೆಂದು ಸುಳ್ಳು ಹೇಳಿದೆ. ನನ್ನ ಸ್ನೇಹಿತರಿಂದ ಯಾವ ತೊಂದರೆಯೂ ಇಲ್ಲ, ಆದರೆ ನನಗೆ ನನ್ನ ಮೇಲೆಯೇ ನಂಬಿಕೆ ಇಲ್ಲ. ಯಾವತ್ತಾದರೂ ನನಗೇ ಆ ದುಡ್ಡಿನ ಬಗ್ಗೆ ಮೋಹ ಉಂಟಾದರೆ...'

'ನೋಡು ಮಗು, ಮೋಹ ಹಾಗೂ ಸಂಯಮಗಳ ನಡುವೆ ನೂಲಿನೆಳೆಯಷ್ಟು ಅಂತರವಿದೆ. ನೀನು ಆ ಅಂತರವನ್ನು ಹಾಗೇ ಇಟ್ಟುಕೊಳ್ಳುವೆ ಎಂಬ ವಿಶ್ವಾಸ ನನಗಿದೆ. ನಿನ್ನ ಈ ಪರಿಸ್ಥಿತಿಯಲ್ಲಿ ಸಂಯಮದಿಂದಿರುವುದು